ಕರ್ನಾಟಕ ಸರ್ಕಾರ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: DTEEXAMOECS3/8/2022

ಆಯುಕ್ತರವರ ಕಛೇರಿ,
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಅರಮನೆ ರಸ್ತೆ, ಬೆಂಗಳೂರು-560001
ದಿನಾಂಕ:17.10.2023

ಸುತ್ತೋಲೆ

ವಿಷಯ: 2023 ರ ನವೆಂಬರ್/ಡಿಸೆಂಬರ್ ಡಿಪ್ಲೋಮ ಸೆಮಿಸ್ಟರ್ ಪರೀಕ್ಷೆಗೆ ನೋಂದಾಯಿಸಲು ಅರ್ಹತೆ ಬಗ್ಗೆ

ಉಲ್ಲೇಖ: 1. ಸರ್ಕಾರದ ಆದೇಶ ಸಂಖ್ಯೆ: ಇಡಿ 178 ಟಿಪಿಇ 2009 ದಿನಾಂಕ: 01.08.2009
2. ಸರ್ಕಾರದ ಆದೇಶ ಸಂಖ್ಯೆ: ಇಡಿ 148 ಟಿಪಿಇ 2015 ದಿನಾಂಕ :23.06.2015
3. ಸರ್ಕಾರದ ಪತ್ರ ಸಂಖ್ಯೆ: ಇಡಿ 147 ಟಪಿಇ 2022 ದಿನಾಂಕ:11.01.2023
4. ಈ ಕಛೇರಿ ಜ್ಞಾಪನ ಸಂಖ್ಯೆ: DTEEXAMOECS3/8/2022 ದಿನಾಂಕ:12.01.2023
5. ತಾಂತ್ರಿಕ ಪರೀಕ್ಷಾ ಮಂಡಳಿಯ 185 ನೇ ಕೇಂದ್ರ ಸಭೆಯನಿರ್ಣಯ.
6. ಈ ಕಛೇರಿ ಸುತ್ತೋಲೆ ಸಂಖ್ಯೆ: ಬಿಟಿಇ/05/ಇಎಪಿ/2023 ದಿನಾಂಕ:18.08.2023

***********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2009-10 ರ ಶೈಕ್ಷಣಿಕ ಸಾಲಿನಲ್ಲಿ ಅಳವಡಿಸಲಾದ ಉಲ್ಲೇಖ (1) ರ C-09 ಪಠ್ಯಕ್ರಮದ, ರೆಗ್ಯುಲೇಶ್ ನ ಕಂಡಿಕೆ (11) ರಲ್ಲಿ ವಿವಿಧ ಡಿಪ್ಲೊಮಾ ಕೋರ್ಸುಗಳಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಕಾಲಮಿತಿಯನ್ನು ಈ ಕೆಳಕಂಡಂತೆ ತಿಳಿಸಲಾಗಿದೆ.

11. MAXIMUM PERIOD FOR COMPLETION OF DIPLOMA COURSES

"Maximum period for completion of the course shall be thrice the duration of the course from the date of First admission (includes the period of detention and discontinuation of studies by student etc) falling which they will have to forfeit the claim for qualifying for the award of Diploma (They will not be permitted to appear for examinations after that date). This rule applies for all Diploma courses of 3 or 3-1/2 years of Engineering and Non-Engineering courses".

ಅದರಂತೆ 2009-10 ರಿಂದ 2014-15 ನೇ ಶೈಕ್ಷಣಿಕ ಸಾಲುಗಳಲ್ಲಿ C-09 ಪಠ್ಯಕ್ರಮದಲ್ಲಿ ಮೊದಲನೇ ವರ್ಷಕ್ಕೆ ಪ್ರವೇಶ ಪಡೆದ ವಿದ್ಯಾರ್ಥಿಗಳು 09 ವರ್ಷಗಳ ಕಾಲಾವಧಿಯಲ್ಲಿ ಉತ್ತೀರ್ಣರಾಗಬೇಕಾಗಿರುತ್ತದೆ ಹಾಗೂ 2011-12 ರಿಂದ 2016-17ನೇ ಶೈಕ್ಷಣಿಕ ಸಾಲಿನವರೆಗೆ ವಿವಿಧ ಡಿಪ್ಲೊಮಾ ಕೋರ್ಸುಗಳಿಗೆ ಲ್ಯಾಟರಲ್ ಎಂಟ್ರಿ ಮುಖಾಂತರ ಎರಡನೇ ವರ್ಷಕ್ಕೆ ಪ್ರವೇಶ ಪಡೆದ ಐಟಿಐ ವಿದ್ಯಾರ್ಥಿಗಳು 06 ವರ್ಷಗಳ ಕಾಲಾವಧಿಯಲ್ಲಿ ಉತ್ತೀರ್ಣರಾಗಬೇಕಾಗಿರುತ್ತದೆ.

ಉಲ್ಲೇಖ (2) ರ C-15 ಪಠ್ಯಕ್ರಮದ, ರೆಗ್ಯುಲೇಶ್ ನ ಕಂಡಿಕೆ (4) F (iii) ರಲ್ಲಿ ವಿವಿಧ ಡಿಪ್ಲೊಮಾ ಕೋರ್ಸುಗಳಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಕಾಲಮಿತಿಯನ್ನು ಈ ಕೆಳಕಂಡಂತೆ ತಿಳಿಸಲಾಗಿದೆ.

"Maximum period for completion of the course shall be thrice the duration of the course from the date of First admission (includes the period of detention and discontinuation of studies by student etc) falling which they will have to forfeit the claim for qualifying for the award of Diploma (They will not be permitted to appear for examinations after that date). This rule applies for all Diploma courses of 3 or 3-1/2 years of Engineering and Non-Engineering courses".

ಅದರಂತೆ 2015-16 ನೇ ಶೈಕ್ಷಣಿಕ ಸಾಲಿನಲ್ಲಿ ಅಳವಡಿಸಲಾದ C-15 ಪಠ್ಯಕ್ರಮದಲ್ಲಿ 2017-18 ನೇ ಶೈಕ್ಷಣಿಕ ಸಾಲಿನಲ್ಲಿ ಡಿಪ್ಲೊಮಾ ಕೋರ್ಸುಗಳಿಗೆ ಲ್ಯಾಟರಲ್ ಎಂಟ್ರಿ ಮುಖಾಂತರ ಎರಡನೇ ವರ್ಷಕ್ಕೆ ಪ್ರವೇಶ ಪಡೆದ ಐಟಿಐ ವಿದ್ಯಾರ್ಥಿಗಳು 06 ವರ್ಷಗಳ ಕಾಲಾವಧಿಯಲ್ಲಿ ಉತ್ತೀರ್ಣರಾಗಬೇಕಾಗಿರುತ್ತದೆ.

ಉಲ್ಲೇಖ (3) ರ ಸರ್ಕಾರದ ಪತ್ರದಲ್ಲಿ 2009-10 ನೇ ಸಾಲಿನಿಂದ 2013-14ನೇ ಶೈಕ್ಷಣಿಕ ಸಾಲಿನವರೆಗೆ ಮೊದಲನೇ ವರ್ಷದ ಡಿಪ್ಲೋಮಗೆ ಪ್ರವೇಶ ಪಡೆದ ವಿದ್ಯಾರ್ಥಿಗಳು ಹಾಗೂ 2011-12 ನೇ ಸಾಲಿನಿಂದ 2016-17ನೇ ಸಾಲಿನವರೆಗೆ ಲ್ಯಾಟರಲ್ ಎಂಟ್ರಿ ಮುಖಾಂತರ 2ನೇ ವರ್ಷದ ಡಿಪ್ಲೊಮಾಗೆ ಪ್ರವೇಶ ಪಡೆದ ಐ.ಟಿ.ಐ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ 2022-23 ನೇ ಸಾಲಿನ 2023 ರ ಜನವರಿ/ಫೆಬ್ರವರಿ ಹಾಗೂ 2023 ರ ಜೂನ್/ಜುಲೈ ಸೆಮಿಸ್ಟರ್ ಪರೀಕ್ಷೆಗಳಿಗೆ ಹಾಜರಾಗಲು ಅನುಮತಿ ನೀಡಲಾಗಿತ್ತು.

ಉಲ್ಲೇಖ (4) ರ ಈ ಕಛೇರಿ ಜ್ಞಾಪನದಲ್ಲಿ ಈ ವಿಷಯವನ್ನು ಎಲ್ಲಾ ಪಾಲಿಟೆಕ್ನಿಕ್ ಸಂಸ್ಥೆಗಳಿಗೆ ತಿಳಿಸಲಾಗಿತ್ತು.

ಉಲ್ಲೇಖ (5) ರ ತಾಂತ್ರಿಕ ಪರೀಕ್ಷಾ ಮಂಡಳಿಯ 185 ನೇ ಕೇಂದ್ರ ಸಭೆಯ ನಿರ್ಣಯದಂತೆ 2011-12, 2012-13, 2013-14, 2014-15, 2015-16, 2016-17 ಮತ್ತು 2017-18 ನೇ ಸಾಲುಗಳಲ್ಲಿ ವಿವಿಧ ಡಿಪ್ಲೋಮ ಕೋರ್ಸ್ ಗಳ 2ನೇ ವರ್ಷಕ್ಕೆ ಲ್ಯಾಟರಲ್ ಎಂಟ್ರಿ ಮುಖಾಂತರ ಪ್ರವೇಶ ಪಡೆದು ಅನುತ್ತೀರ್ಣರಾಗಿ ಬಾಕಿ ಉಳಿದಿರುವ ವಿದ್ಯಾರ್ಥಿಗಳಿಗೆ ಹಾಗೂ 2009-10, 2010-11, 2011-12, 2012-13, 2013-14 ಮತ್ತು 2014-15 ನೇ ಸಾಲುಗಳಲ್ಲಿ ವಿವಿಧ ಡಿಪ್ಲೋಮ ಕೋರ್ಸ್ ಗಳ 1ನೇ ವರ್ಷಕ್ಕೆ ಪ್ರವೇಶ ಪಡೆದು ಅನುತ್ತೀರ್ಣರಾಗಿ ಬಾಕಿ ಉಳಿದಿರುವ ವಿದ್ಯಾರ್ಥಿಗಳಿಗೆ 2023-24 ರ ಶೈಕ್ಷಣಿಕ ಸಾಲಿನಲ್ಲಿ ನಡೆಯುವ ಮತ್ತು ಮುಂದಿನ ಪರೀಕ್ಷೆಗಳಲ್ಲಿ ಅವಕಾಶ ನೀಡದಿರಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿರುತ್ತದೆ ಹಾಗೂ ಉಲ್ಲೇಖ(6) ರ ಸುತ್ತೋಲೆಯಲ್ಲಿ ಸ್ಪಷ್ಟಪಡಿಸಲಾಗಿದೆ.

ಪ್ರಯುಕ್ತ 2011-12, 2012-13, 2013-14, 2014-15, 2015-16, 2016-17 ಮತ್ತು 2017-18 ನೇ ಸಾಲುಗಳಲ್ಲಿ ವಿವಿಧ ಡಿಪ್ಲೋಮ ಕೋರ್ಸ್ ಗಳ 2ನೇ ವರ್ಷಕ್ಕೆ ಲ್ಯಾಟರಲ್ ಎಂಟ್ರಿ ಮುಖಾಂತರ ಪ್ರವೇಶ ಪಡೆದು ಅನುತ್ತೀರ್ಣರಾಗಿ ಬಾಕಿ ಉಳಿದಿರುವ ವಿದ್ಯಾರ್ಥಿಗಳಿಗೆ ಹಾಗೂ 2009-10, 2010-11, 2011-12, 2012-13, 2013-14 ಮತ್ತು 2014-15 ನೇ ಸಾಲುಗಳಲ್ಲಿ ವಿವಿಧ ಡಿಪ್ಲೋಮ ಕೋರ್ಸ್ ಗಳ 1ನೇ ವರ್ಷಕ್ಕೆ ಪ್ರವೇಶ ಪಡೆದು ಅನುತ್ತೀರ್ಣರಾಗಿ ಬಾಕಿ ಉಳಿದಿರುವ ವಿದ್ಯಾರ್ಥಿಗಳಿಗೆ 2023ರ ನವೆಂಬರ್/ಡಿಸೆಂಬರ್ ಡಿಪ್ಲೋಮ ಸೆಮಿಸ್ಟರ್ ಪರೀಕ್ಷೆ ಮತ್ತು ಮುಂದಿನ ಡಿಪ್ಲೋಮ ಸೆಮಿಸ್ಟರ್ ಪರೀಕ್ಷೆಗಳಿಗೆ ಹಾಜರಾಗಲು ಅವಕಾಶವಿರುವುದಿಲ್ಲವೆಂದು ಸ್ಪಷ್ಟವಾಗಿ ತಿಳಿಸಲಾಗಿದೆ.

ಈ ವಿಷಯವನ್ನು ಸಂಬಂಧಿಸಿದ ಎಲ್ಲಾ ವಿದ್ಯಾರ್ಥಿಗಳು/ಪೋಷಕರು/ಉಪನ್ಯಾಸಕರು/ಸಿಬ್ಬಂದಿಗಳ ಗಮನಕ್ಕೆ ತಪ್ಪದೇ ತರುವಂತೆ ತಿಳಿಸಲಾಗಿದೆ ಹಾಗೂ ಯಾವುದೇ ಲೋಪ/ಗೊಂದಲಗಳಿಗೆ ಅವಕಾಶ ಮಾಡಿಕೊಂಡದಂತೆ ಕ್ರಮ ವಹಿಸಲು ಮತ್ತು ಯಾವುದೇ ರೀತಿಯ ಲೋಪಗಳಿಂದ ಉದ್ಭವಿಸುವ ಕಾನೂನಾತ್ಮಕ ಸಮಸ್ಯೆಗಳಿಗೆ ಸಂಬಂಧಪಟ್ಟ ಸಂಸ್ಥೆಯ ಪ್ರಿನ್ಸಿಪಾಲರುಗಳನ್ನೇ ನೇರ ಹೊಣೆಗಾರರನ್ನಾಗಿಸಲಾಗುವುದು ಎಂದು ಪ್ರಿನ್ಸಿಪಾಲರುಗಳಿಗೆ ತಿಳಿಸಲಾಗಿದೆ.

ಕಾರ್ಯದರ್ಶಿ

ಇವರಿಗೆ,
ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್ ಗಳ ಪ್ರಿನ್ಸಿಪಾಲರುಗಳಿಗೆ

- ಮುಂದಿನ ಅಗತ್ಯ ಕ್ರಮಕ್ಕಾಗಿ

ಪ್ರತಿ:

1. ಇ-ಗವರ್ನೆನ್ಸ್ ವಿಭಾಗಕ್ಕೆ – ವೆಬ್ ಸೈಟ್ ನಲ್ಲಿ ಪ್ರಕಟಿಸಲು
2. ಗಣಕ ಕೇಂದ್ರ- ವೆಬ್ ಪೋರ್ಟಲ್ ನಲ್ಲಿ ಪ್ರಕಟಿಸಲು
3. ಮಾನ್ಯ ಆಯುಕ್ತರ ಆಪ್ತಶಾಖೆ
4. ಕಾರ್ಯದರ್ಶಿಯವರ ಆಪ್ತಶಾಖೆ